ಟಾಂ ಟಾಂ ಮಾಡಿ ಭಿತ್ತಿ ಪತ್ರಗಳನ್ನು ಹಂಚಿದ್ದೇವೆ. ಬಿಜಾಪುರದಲ್ಲಿ ಕೆಲವು ರೈತರಿಗೆ ಹೊರಗಡೆ ಹೋಗತಕ್ಕಂತಹ ಅಭ್ಯಾಸ ಇರುವುದರಿಂದ, ಅವರು ಹೇಳಿದ ಹಾಗೆ ಇನ್ನೂ ಬಹಳಷ್ಟು ಜನ ರೈತರನ್ನು ಈ ಯೋಜನೆಗೆ ಒಳಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ತೀವ್ರವಾಗಿ ಪ್ರಯತ್ನ ಮಾಡುತ್ತೇನೆ. ಒಂದೇ ವರ್ಷಕ್ಕೆ ಈ ಯೋಜನೆ ಇರುವುದಾದರೂ ಸಹ ಈ ಯೋಜನೆಯ ಪ್ರತಿ ಫಲವನ್ನು ಅನುಸರಿಸಿ ಇದನ್ನು ಮುಂದುವರಿಸುವ ಆಲೋಚನೆ ಇದೆ. ಮುಂದೆ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Mr. SPEAKER :- No clarifications during zerohour.

(ಖೂ) <u>ಅನಾಥಾಶ್ರಮದಲ್ಲಿನ ಹೆಣ್ಣು ಮಕ್ಕಳಿಗೆ ಉದ್ಯೋಗ</u>

ಶ್ರೀ ಸಿ. ಗುರುನಾಥ (ಶಹಬಾದ್) :- ಮಾನ್ಯ ಅಧ್ಯಕ್ಷರೆ, ಅನಾಥ ಹೆಣ್ಣುಮಕ್ಕಳು ಅನಾಥಾಶ್ರಮದಲ್ಲಿ ಇದ್ದಾರೆ. ಹಲವಾರು ಕಾರಣಕ್ಕಾಗಿ ಅನಾಥ ಆಶ್ರಮದಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳು ಇದ್ದಾರೆ. ಈ ಅನಾಥಾಶ್ರಮದಲ್ಲಿರತಕ್ಕಂತಹ ಹೆಣ್ಣು ಮಕ್ಕಳ ಬಗ್ಗೆ ಯಾರೂ ಚಿಂತೆ ಮಾಡುವ ಸ್ಥಿತಿಯಲ್ಲಿ ಇಲ್ಲ. ಅನೇಕ ಹೆಣ್ಣುಮಕ್ಕಳು ತಮ್ಮ ಬಾಲ್ಯದಿಂದ ಮುಪ್ಪಿನವರೆಗೆ ಅನಾಥಾಶ್ರಮದಲ್ಲಿ ಯಾವುದೇ ಸುಖ ಸಂತೋಷ ಪಡೆಯದೇ ಇದ್ದಾರೆ. ಅವರಿಗಾಗಿ ವಿಶೇಷವಾದ ಪ್ರಾತಿನಿಧ್ಯವನ್ನು ಶಿಕ್ಷಣದಲ್ಲಿ ಉದ್ಯೋಗದಲ್ಲಿ ಕೊಡಬೇಕೆಂದು ನನ್ನ ಅನಿಸಿಕೆ ಇದೆ. ಅನಾಥಾಶ್ರಮದಲ್ಲಿರತಕ್ಕಂತಹ ಗಂಡು ಮಕ್ಕಳು ಸ್ವಲ್ಪ ವಯಸ್ಸಾದ ನಂತರ ಅಲ್ಲಿಂದ ಹೊರಗೆ ಹೋಗಿ ಅವರು ತಮ್ಮ ಕಾಲ ಮೇಲೆ ನಿಲ್ಲತಕ್ಕಂತಹ ವ್ಯವಸ್ಥೆ ಮಾಡಿಕೊಳ್ಳಬಹುದು. ಆದರೆ ಹೆಣ್ಣುಮಕ್ಕಳ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಈ ಸಮಾಜದಲ್ಲಿ ಅವರು ಮದುವೆಯಾಗದೆ ಮುಪ್ಪನ್ನಪ್ಪಿದ್ದಾರೆ. ಅವರಿಗೆ ವೃತ್ತಿಪರ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕೊಟ್ಟರೆ ಅವರು ತಮ್ಮ ಕಾಲ ಮೇಲೆ ನಿಲ್ಲಬಹುದು. ಅದರಿಂದ ಅವರ ಮದುವೆಯಾಗತಕ್ಕಂತಹ ಸಂದರ್ಭ ಕೂಡ ಬರುತ್ತದೆ. ಸರಕಾರ ಇಂತಹ ಅವಕಾಶವನ್ನು ಅವರಿಗೆ ಒದಗಿಸಿಕೊಡುವ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ಮಿಮಲಾಬಾಯಿ ದೇಶಮುಖ (ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಚಿವೆ):- ಮಾನ್ಯ ಗುರುನಾಥ್ ಅವರು ಹೇಳಿದ ಪ್ರಕಾರ ಅನಾಥ ಹೆಣ್ಣುಮಕ್ಕಳಿಗಾಗಿ ಅನಾಥಾಲಯದಲ್ಲಿ ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸಿದ್ದೇವೆ. ಆದರೆ ವೃದ್ಧಾಶ್ರಮದಲ್ಲಿ ಅವರಿಗೆ ಮಾಡಲು ಕೆಲಸ ಇಲ್ಲದ್ದರಿಂದ ಅವರಿಗಾಗಿ ಯಾವುದೇ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲ. 18 ವರ್ಷದವರೆಗೆ ನಾವು ಅನಾಥಾಲಯದಲ್ಲಿ ಶಿಕ್ಷಣ ಕೊಡುತ್ತೇವೆ. ಮುಂದಾದರೂ ಪರಿಶೀಲನೆ ಮಾಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

(ಎ) <u>ಚಿಂಚೋಳಿಯ ಒಂದು ಗ್ರಾಮದಲ್ಲಿ ತೊಗರಿಬೆಳೆ ನಾಶವಾಗಿರುವುದರಿಂದ ರೈತರ ಆತ್ಮಹತ್ಯೆ</u>

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) :- ಚಿಂಚೋಳಿಯ ಒಂದು ಗ್ರಾಮದಲ್ಲಿ ಸುಬ್ಬಣ್ಣ ಹಡಪದ ಎಂಬ ಬಡ ರೈತ ತೊಗರಿ ಬೇಳೆ ಲಾಸಾದ್ದರಿಂದ ಅವನು ತನ್ನ ಎತ್ತುಗಳನ್ನು ಮಾರಿಕೊಂಡಿದ್ದಾನೆ. ಇಂತಹ ಪರಿಸ್ಥಿತಿಯಲ್ಲ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ವರದಿಯಾಗಿದೆ ಸರಕಾರ ಆತನ ಕುಟುಂಬಕ್ಕೆ ಪರಿಹಾರ ಕೊಡಬೇಕು. ತೊಗರಿ ಬೆಳೆ ನಾಶವಾದುದಕ್ಕಾಗಿ

ಆಂಧ್ರ ಸರಕಾರದವರು ಒಂದು ಎಕರೆಗೆ 400 ರೂಪಾಯಿಯಂತೆ ಕೊಟ್ಟಿದ್ದಾರೆ. ಮಾನ್ಯ ಮೊಯಿಲಿಯವರ ಕಾಲದಲ್ಲಿ ಕೂಡ ಕೊಟ್ಟಿದ್ದಾರೆ. ನಮ್ಮ ಸರಕಾರದವರು ಇದರ ಬಗ್ಗೆ ವೆರಿಫೈ ಮಾಡಬೇಕು. ಆದರೆ ಇತ್ತೀಚೆಗೆ ಚುನಾವಣೆಗಿಂತ ಮೊದಲು ಪರಿಹಾರ ಕೊಡಲಿಕ್ಕೆ ಕೋಡ್ ಆಫ್ ಕಂಡ್‌ಕ್ಟ್ ಇದೆ ಆ ದೃಷ್ಟಿಯಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೆ ಇವತ್ತು ಏಕೋ ಅದನ್ನು ಹಾರಿಸುತ್ತಿದ್ದಾರೆ. 25 ಕೋಟಿ ರೂಪಾಯಿಯನ್ನು ಮಾನ್ಯ ಪ್ರಧಾನ ಮಂತ್ರಿಯವರು ಪರಿಹಾರ ಧನವೆಂದು ಕೊಟ್ಟಿದ್ದಾರೆ. ಚುನಾವಣೆಯ ನಂತರ ಇದನ್ನು ಹಂಚುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಬೀದರಿನಲ್ಲಿ ಹೇಳಿಕೆ ಕೂಡ ಕೊಟ್ಟಿದ್ದರು. ಆದರೆ ಇವತ್ತು ಕೊಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 25 ಕೋಟಿ ಪ್ರಧಾನ ಮಂತ್ರಿ ಕೊಟ್ಟಿದ್ದು ಹಣ ಎಲ್ಲಿ ಇದೆ ಹೇಳಿ.

ಶ್ರೀ ವೈಜನಾಥ ಪಾಟೀಲ್:- ಒಕ್ಕಲುತನ ಉದ್ಯೋಗದಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಲಾಸಾಗುತ್ತಿದೆ. ಅಮೇರಿಕಾದಂತಹ ದೇಶಗಳಲ್ಲಿ ಕೂಡ ಇದಕ್ಕೆ ಸಬ್ಸಿಡಿ ಕೊಡುತ್ತಾರೆ. ಮಳೆ ಹೆಚ್ಚಾದರೂ ಇದರಲ್ಲಿ ಲಾಸಾಗುತ್ತದೆ ಮಳೆ ಕಡಿಮೆಯಾದರೂ ಲಾಸಾಗುತ್ತದೆ. ಆದರೆ ಇಂಡಸ್ಟ್ರೀಯಲ್ ಪ್ರೊಡಕ್ಷನ್ ಹಾಗೆ ಇರುವುದಿಲ್ಲ. ಮಳೆ ಕಡಿಮೆ ಹೆಚ್ಚು ಆದರೂ ಕೂಡ ಲಾಸಾಗುವುದಿಲ್ಲ. ಸರಕಾರಿ ನೌಕರರು ಮುಷ್ಕರ ಮಾಡಿದರೂ ಸಾವಿರಾರು ಕೋಟಿ ರೂಪಾಯಿಯನ್ನು ನಮ್ಮ ಸರಕಾರ ಕೊಡುತ್ತದೆ ಅದನ್ನು ಎಲ್ಲಿಂದ ತರಬೇಕು.

ಅಧ್ಯಕ್ಷರು:- ನಿಮಗೆ ಏನಾಗಬೇಕು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಪಾರ್ಟಿಯಲ್ಲಿ ಜನತಾ ದಳದ ಸದಸ್ಯರು ಮಾತನಾಡುವುದಕ್ಕೆ ಬಿಡುವುದಿಲ್ಲ. ಇಲ್ಲಿ ಮಾತನಾಡಬೇಕು ಎಂದರೆ ಶೂನ್ಯ ವೇಳೆಯಲ್ಲಿ ಸ್ವಲ್ಪ ಹೇಳಿ ಎಂದು ನೀವು ಹೇಳುತ್ತೀರಿ. ಅಲ್ಲಿ ಸರಕಾರ ಮಾತನಾಡಲಿಕ್ಕೆ ಬಿಡುವುದಿಲ್ಲ. ಇದು ಹೇಗಾಗುತ್ತದೆ?

ಅಧ್ಯಕ್ಷರು:- ನಿಮಗೆ ಆ ಪಾಟೀಲರ ಮೇಲಿರುವ ಸಿಂಪತಿ ಈ ಪಟೀಲ್‌ರ ಮೇಲೆ ಇರಬಾರದಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರ ಮೇಲೆ ಇರಲಿ ಎಂದು ಹೇಳುತ್ತೇವೆ. ಅವರಿಗೆ ಅನುಕೂಲ ಮಾಡಿಕೊಡಲಿ ಎಂದು ಹೇಳುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ:- ಸರಕಾರ ಪ್ರತಿ ಹೆಕ್ಟೇರಿಗೆ 500 ರೂ. ಗೆ ಬದಲಾಗಿ ಪ್ರತಿ ಎಕರೆಗೆ 500 ರೂಪಾಯಿಕೊಡಲು ಒಪ್ಪಿಕೊಳ್ಳಬೇಕು ಹಣ ಬಿಡುಗಡೆ ಮಾಡಬೇಕು. ನಮ್ಮ ಗ್ರಾಮದಲ್ಲಿ ಯಾವ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅವರಿಗೆ ಪರಿಹಾರ ಕೊಡುವ ಬಗ್ಗೆ ಮಾನ್ಯ ಮಂತ್ರಿಯವರು ತಿಳಿಸಬೇಕು.

11. 10 ಎ.ಎಂ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಸರ್ಕಾರದ ಪರವಾಗಿ ನಾನು ಉತ್ತರವನ್ನು ನೀಡಿದ್ದೇವೆ. ಅಲ್ಲಿ ಬೆಳೆ ನಷ್ಟವಾಗಿದೆ. ಆದುದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ Per hectare Rs. 500 subject to maximum of Rs. 2000/- per farmer input subsidy ಕೊಡಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ. ಅದು ಅವರ ತಾಲ್ಲೂಕಿಗೂ

ಕೂಡ ಅನ್ವಯಿಸುತ್ತದೆ. ಇನ್ನು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನೂ ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಬಗ್ಗೆ ತನಿಖೆ ನಡೆಯುತ್ತಿದ್ದು ಬೆಳೆ ಹಾನಿಯಿಂದಲೇ ಆತ್ಮಹತ್ಯೆಗಳಾಗಿವೆ ಎಂಬುದು ತನಿಖೆಯಿಂದ ಸ್ಪಷ್ಟವಾದರೆ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಕೊಡಲಾಗುವುದು; ಎಂಬುದನ್ನೂ ಕೂಡ ಈಗಾಗಲೇ ತಿಳಿಸಲಾಗಿದೆ. ಅದೇ ರೀತಿ ಅವರ ತಾಲ್ಲೂಕಿನಲ್ಲಿಯೂ ಬೆಳೆ ಹಾನಿಯಿಂದ ಆತ್ಮಹತ್ಯೆಗಳಾಗಿರುವುದು ನಿಜವಾಗಿದ್ದಲ್ಲಿ ಅದಕ್ಕೆ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಚಿಸುತ್ತೇನೆ.

(ಎ) <u>ಶಿಗ್ಗಾಂವ್ ತಾಲ್ಲೂಕಿನಲ್ಲಿ ಸಹಕಾರ ಸಂಘಗಳ ಮುಖಾಂತರ ನೀಡಿರುವ ಸಾಮೂಹಿಕ ನೀರಾವರಿ ಯೋಜನೆಗಳ ಸಾಲ ಮರು ಪಾವತಿ</u>

ಶ್ರೀ ಮಂಜುನಾಥ ಸಿ. ಕುನ್ನೂರ್(ಶಿಗ್ಗಾಂವ್) :- ಶಿಗ್ಗಾಂವ್ ತಾಲ್ಲೂಕಿನ ಕಂಕಣವಾಡ, ಚಿಕ್ಕಮಲ್ಲೂರ, ಹಿರಿಮಲ್ಲೂರ ಗ್ರಾಮಗಳಲ್ಲಿ 1997-98ನೇ ಸಾಲಿನಲ್ಲಿ ಸಹಕಾರ ಸಂಘಗಳ ಮುಖಾಂತರ ಸಾಮೂಹಿಕ ನೀರಾವರಿ ಯೋಜನೆಗಾಗಿ ರೈತರು ಸಾಲ ಪಡೆದಿದ್ದು ಆ ಸಾಲವನ್ನು ದಿನಾಂಕ 24.3.98 ರೊಳಗಾಗಿ ಮರುಪಾವತಿ ಮಾಡಬೇಕೆಂದು ಸರ್ಕಾರ ಆದೇಶ ನೀಡಿದೆ. ರೈತರಿಗೆ ಈ ಬಗ್ಗೆ ನೋಟೀಸ್‌ಗಳನ್ನೂ ಕೂಡ ಜಾರಿ ಮಾಡಲಾಗಿದೆ. ಸಾಮೂಹಿಕ ನೀರಾವರಿ ಯೋಜನೆಯಲ್ಲಿ ಸುಮಾರು 3 ಲಕ್ಷ 27 ಸಾವಿರ ರೂಪಾಯಿಗಳ ಸಾಲವನ್ನು ಪಡೆಯಲಾಗಿದ್ದು ಅದಕ್ಕೆ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಒಂದು ಲಕ್ಷ ರೂಪಾಯಿ ಸಹಾಯ ಧನವನ್ನು ಕೊಟ್ಟಿದ್ದಾರೆ. 1985ರಿಂದ ಈ ಸಹಕಾರ ಸಂಘದಲ್ಲಿದ್ದಂತಹ ರೈತರು ಸಣ್ಣ ಮತ್ತು ಅತಿಸಣ್ಣ ಹಾಗೂ ಬಡ ರೈತರಾಗಿದ್ದಾರೆ. ಈ ವರ್ಷ ಸಕಾಲದಲ್ಲಿ ಮಳೆ ಬೀಳದಿದ್ದರಿಂದ ಅವರು ಬಹಳಷ್ಟು ತೊಂದರೆಗೆ ಒಳಗಾಗಿದ್ದಾರೆ. ನಿಗಧಿಪಡಿಸಿದ ಅವಧಿಯೊಳಗೆ ಸಾಲ ಮರುಪಾವತಿ ಮಾಡದಿದ್ದಲ್ಲಿ ಸರ್ಕಾರ ಅವರ ಜಂಗಮ ಆಸ್ತಿ ಪಾಸ್ತಿಗಳನ್ನು ಜಪ್ತಿ ಮಾಡುವುದಾಗಿ ಆದೇಶ ಹೊರಡಿಸಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಈಗಾಗಲೇ ಧಾರವಾಡ ಜಿಲ್ಲಾ ಪಂಚಾಯಿತಿಯಲ್ಲಿ ತರೂರು ಗ್ರಾಮದ ಇಂಥದ್ದೇ ಒಂದು ಸಹಕಾರ ಸಂಘಕ್ಕೆ ಒಂದು ಹಂತದಲ್ಲಿ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿನ ರೈತರಿಗೂ ರಿಯಾಯಿತಿ ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಸದ್ಯಕ್ಕೆ ಆ ಸಾಲವನ್ನು ವಸೂಲಿ ಮಾಡದಂತೆ ಸೂಕ್ತ ಆದೇಶ ಹೊರಡಿಸಿ ರೈತರಿಗೆ ಸಾಲ ಮರುಪಾವತಿಗೆ ಸಮಯಾನುಕಾಶ ಕೊಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಯಾರು ಸಾಲ ಪಡೆದುಕೊಂಡಿದ್ದಾರೆ ಅವರು ಸಾಲ ತೀರಿಸಬೇಕಾಗುತ್ತದೆ. ಆದುದರಿಂದ ಅವರು ನೋಟೀಸ್‌ಗಳನ್ನು ಕಳುಹಿಸಿದ್ದಾರೆ. ಬಹುಶಃ ಬರಗಾಲ ಬಂದು ರೈತರಿಗೆ ಈ ವರ್ಷ ಬೆಳೆಯಾಗದೆ ಸಾಲವನ್ನು ಮರುಪಾವತಿ ಮಾಡುವುದಕ್ಕಾಗದಿರುವಂತಹ ಪರಿಸ್ಥಿತಿ ನಿರ್ಮಾಣವಾದರೆ ಅವರ ಬಗ್ಗೆ ಕ್ರಮಗಳನ್ನು ಕೈಗೊಂಡು ಸೂಕ್ತವಾಗಿರುವಂತಹ ಆದೇಶವನ್ನು ಕೊಡುತ್ತೇನೆ.